**<u>ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ .ದಂ. ನ್ಯಾಯಾಲಯ ಕುಣಿಗಲ್</u>**

**ಸಿ.ಸಿ. 13/2023**

ಸಾಕ್ಷಿದಾರರ ಹೆಸರು : ಪ್ರಮೋದ್

ತಂದೆಯ ಹೆಸರು : ಮೋಹನ್

ವಯಸ್ಸು : 29 ವರ್ಷ

ಉದ್ಯೋಗ : ಖಾಸಗಿ ಉದ್ಯೋಗಿ

ವಾಸ : ತಿಪಟೂರು.

**<u>ಸಾಕ್ಷಿಯನ್ನು ದಿನಾಂಕ:08.06.2026 ರಂದು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.</u>**

**<u>ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:</u>**

ಈ ಪ್ರಕರಣದ ಬಗ್ಗೆ ನನಗೆ ಗೊತ್ತಿಲ್ಲ. ಸಾಕ್ಷಿಯು ಸ್ಥಳ ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ **ನಿಪಿ.2** ಎಂದು, ಅದರಲ್ಲಿನ ಸಹಿಯನ್ನು **ನಿ.ಪಿ.2(ಬಿ)** ಎಂದು ಗುರುತಿಸಲಾಯಿತು. ಸಾಕ್ಷಿಯು ಎರಡು ಅಮಾನತು ಪಂಚನಾಮೆಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ **ನಿಪಿ.3 ಮತ್ತು ನಿಪಿ.4** ಎಂದು, ಅವುಗಳಲ್ಲಿರುವ ಸಹಿಗಳನ್ನು **ನಿಪಿ.3(ಬಿ) ಮತ್ತು ನಿಪಿ.4(ಬಿ)** ಎಂದು ಗುರುತಿಸಲಾಯಿತು. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ. 2023-24 ರಲ್ಲಿ ನಾನು ಠಾಣೆಯಲ್ಲಿ ಪೊಲೀಸರಿ ಕೋರಿಕೆಯ ಮೇರೆಗೆ ಸಹಿ ಮಾಡಿರುತ್ತೇನೆ. ನಿಪಿ.2 ರಿಂದ 4ರಲ್ಲಿ ಬರೆದಿರುವ ಮಾಹಿತಿಗಳು ನನಗೆ ಗೊತ್ತಿಲ್ಲ. ಪಂಚನಾಮೆ ಮಾಡಿ ಪೋಲಿಸರು ಏನು ಮಾಡಿರುತ್ತಾರೆ ಎಂಬುದು ನನಗೆ ಗೊತ್ತಿಲ್ಲ. ಪೋಲಿಸರು ಚಾಸಾ.7 ರವರಿಗೆ ವಾಹನ ಬಿಡಿಸಿಕೊಳ್ಳಲು ಕಲಂ 133 ನೋಟಿಸ್ ನೀಡಿದ್ದರು ಎಂದರೆ ಸರಿ. ಸದರಿ ನೋಟಿಸ್ ಗೆ ನಾನು ಉತ್ತರ ನೀಡಿದ್ದೆನು ಎಂದರೆ ಸರಿ.

ಸಾಕ್ಷಿಯು ಉತ್ತರ ನೀಡಿದ್ದ ದಾಖಲೆಯನ್ನು ನಿಪಿ.7 ಎಂದು ಗುರುತಿಸಲಾಗಿದೆ. ಅದರಲ್ಲಿರುವ ಸಹಿಯನ್ನು **ನಿಪಿ.7(ಎ)** ಎಂದು ಗುರುತಿಸಲಾಗಿದೆ.

ಚಾಸಾ.7 ರವರು ನನಗೆ ನೀಡಿದ ಅಧಿಕಾರ ಪತ್ರದ ಆಧಾರದ ಮೇಲೆ ಕಾರನ್ನು ವಶಕ್ಕೆ ಪಡೆದಿರುತ್ತೇನೆ. ಸದರಿ ನಷ್ಟಭರ್ತಿ ಪ್ರಮಾಣ ಪತ್ರದಲ್ಲಿ ನಾನು ಸಹಿ ಮಾಡಿರುತ್ತೇನೆ. ಸಾಕ್ಷಿಯು ಸಹಿ ಮಾಡಿದ ನಷ್ಟಭರ್ತಿ ಪ್ರಮಾಣ ಪತ್ರವನ್ನು ನಿಪಿ.8 ಎಂದು ಗುರುತಿಸಲಾಗಿದೆ. ಅದರಲ್ಲಿರುವ ಸಹಿಯನ್ನು **ನಿಪಿ.8(ಎ)** ಎಂದು ಗುರುತಿಸಲಾಗಿದೆ.

**( ಈ ಹಂತರದಲ್ಲಿ ಮಾನ್ಯ ಸ. ಸ. ಅ. ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ವಾಟೀ ಸವಾಲಿಗೆ ನ್ಯಾಯಾಲಯದ ಅನುಮತಿಯನ್ನು ಕೋರಿರುತ್ತಾರೆ. ಅನುಮತಿ ನೀಡಲಾಯಿತು.)**

**<u>ವಾಟೀ ಸವಾಲುಃ ಮಾನ್ಯ ಸ.ಸ. ಅ ರವರಿಂದಃ</u>**

ದಿನಾಂಕ 11.10.2022ರ ಮಧ್ಯಾಹ್ನ ಸುಮಾರು 02.30ರ ಸಮಯದಲ್ಲಿ ಕುಣಿಗಲ್ ನ ಮಲ್ಲಿಪಾಳ್ಯದಲ್ಲಿರುವ ಲುಪಿತ್ ಗಾರ್ಡನ್ ಡಾಬಾ ನೇರದಲ್ಲಿ ಹಾದುಹೋಗಿರುವ ಕುಣಿಗಲ್ - ಎಡಿಯೂರು ಎನ್.ಹೆಚ್-75 ರಸ್ತೆಯ ಎಡಬದಿಯಲ್ಲಿ 2ನೇ ಆರೋಪಿಯು ಕೆಎ-06-ಟಿಸಿ-2019/1 ನೇ ನಂಬರಿನ ಟಾಟಾ ಟಿಗೋರ್ ಕಾರಿನಲ್ಲಿ ನನ್ನನ್ನು ಮತ್ತು ಚಾಸಾ.3 ರವರನ್ನು ಕೂರಿಸಿಕೊಂಡು ಟೆಸ್ಟ್ ಡ್ರೈವ್ ಗಾಗಿ ಬಿಳಿದೇವಾಲಯ ಕಡೆಗೆ ಕಾರನ್ನು ಚಾಲನೆ ಮಾಡಿಕೊಂಡು ಹೋಗುತ್ತಿರುವಾಗ 1ನೇ ಆರೋಪಿಯು ಕೆಎ-13-ಎಫ್-2266 ನೇ ಕೆ.ಎಸ್.ಆರ್.ಟಿ.ಸಿ ಬಸ್ಸನ್ನು ಕುಣಿಗಲ್ ಕಡೆಯಿಂದ ಎಡೆಯೂರು ಕಡೆಗೆ ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಕಾರಿನ ಹಿಂಭಾಗಕ್ಕೆ ಡಿಕ್ಕಿಪಡಿಸಿದ ಪರಿಣಾಮ ಎರಡು ವಾಹನಗಳು ಜಖಂಗೊಂಡು ಅಪಘಾತವಾಗಿತ್ತು ಎಂದರೆ ಸರಿಯಲ್ಲ.

ಸದರಿ ಅಪಘಾತದ ನಂತರ ಚಾಸಾ.1 ರವರು ನಿಪಿ.1ರಂತೆ ದೂರು ನೀಡಿದ್ದರು ಎಂದರೆ ಸರಿಯಲ್ಲ. ದಿನಾಂಕಃ 11.10.2022 ರಂದು ಸಂಜೆ 5.45-6.30 ರವರೆಗೆ ಪೋಲಿಸರು ಘಟನಾ ಸ್ಥಳದ ಪಂಚನಾಮೆ ಮಾಡಿ, ನನ್ನ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಚಾಸಾ.1 ಮತ್ತು 4 ರವರು ಸಹ ಇದ್ದರು ಎಂದರೆ ಸರಿಯಲ್ಲ. ಅದೇ ದಿನ ಪೊಲೀಸ್ ಠಾಣಾ ಆವರಣದಲ್ಲಿ ಅಪಘಾತಕ್ಕೀಡಾದ ನಮ್ಮ ಕಾರನ್ನು ಸಂಜೆ 6.45 ರಿಂದ 7.30 ರವರೆಗೆ ಅಮಾನತು ಪಡಿಸಿಕೊಂಡು ನನ್ನ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಚಾಸಾ.1 ಮತ್ತು 4 ರವರು ಸಹ ಇದ್ದರು ಎಂದರೆ ಸರಿಯಲ್ಲ. ಮರುದಿನ ಅಪಘಾತಪಡಿಸಿದ ಕೆ ಎಸ್ ಆರ್ ಟಿ ಸಿ ಬಸ್ಸನ್ನು ಮಧ್ಯಾಹ್ನ 1.00 ರಿಂದ 1.45 ರವರೆಗೆ ಅಮಾನತು ಪಡಿಸಿಕೊಂಡು ನನ್ನ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಸಮಯದಲ್ಲಿ ಚಾಸಾ.1 ಮತ್ತು 4 ಹಾಗೂ ಆರೋಪಿ ಇದ್ದರು ಎಂದರೆ ಸರಿಯಲ್ಲ. ನಮ್ಮ ಸಮಕ್ಷಮ ಪಂಚನಾಮೆ ಮಾಡಿ ನಮ್ಮ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ನಾನು ಘಟನೆಯ ಕುರಿತು ಪೊಲೀಸರಿಗೆ ಹೇಳಿಕೆ ನೀಡಿದ್ದೆ ಎಂದರೆ ಸರಿಯಲ್ಲ. ಹೇಳಿಕೆಯ ಭಾಗವನ್ನು ಸಾಕ್ಷಿಗೆ ಓದಿ ಹೇಳಲಾಗಿ ಸಾಕ್ಷಿಯು ಒಪ್ಪಿಕೊಳ್ಳದ ಕಾರಣ ಒಪ್ಪಿಕೊಳ್ಳದ ಹೇಳಿಕೆಯನ್ನು **ನಿಪಿ-6** ಎಂದು ಗುರುತಿಸಲಾಗಿದೆ. ನಮ್ಮ ಸಮಕ್ಷಮ ಪಂಚನಾಮೆ ಮಾಡಿದ್ದರೂ ಸಹ ಆರೋಪಿಗೆ ಅನೂಕೂಲ ಮಾಡಲು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃಆರೋಪಿ ಪರ ವಕೀಲರಿಂದಃ ಇರುವುದಿಲ್ಲ ಎಂದು ತಿಳಿಸಿರುತ್ತಾರೆ.**

ಮರುವಿಚಾರಣೆ ಇಲ್ಲ.

**( ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

ಓ. ಹೇ.ಕೇ. ಸರಿ ಇದೆ .

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ .ದಂ .
ಕುಣಿಗಲ್